



ಅವರು 1960ರ ದಶಕದ ಆರಂಭದಲ್ಲಿ ಅಮೆರಿಕಕ್ಕೆ ತೆರಳಿದರು ಮತ್ತು ಅಲ್ಲಿಯೇ ತಮ್ಮ ಸಂಪೂರ್ಣ ಜೀವನವನ್ನು ಕಳೆದರು. 1962ರಲ್ಲಿ ಅವರು 'ನ್ಯೂಯಾರ್ಕ್ ಆರ್ಟ್ ಸ್ಟೂಡೆಂಟ್ ಲೀಗ್'ನಿಂದ ವಿದ್ಯಾರ್ಥಿವೇತನವನ್ನು ಪಡೆದರು. ಪ್ರಿಂಟ್ ಮಾಧ್ಯಮದಲ್ಲೂ ಕಲಾಕೃತಿಗಳನ್ನು ಸೃಷ್ಟಿಸಿದರು. ಜಲವರ್ಣಗಳಲ್ಲಿ ಚಿತ್ರಿಸುವಿಕೆಯೂ ಮುಂದುವರೆದಿತ್ತು.

ಶ್ರೀಮತಿಯವರು ಹೊರ ಪ್ರಪಂಚಕ್ಕೆ ದೊಡ್ಡ ರೀತಿಯಲ್ಲಿ ಪರಿಚಿತರಾದದ್ದು ತೀರಾ ಇತ್ತೀಚೆಗೆ, 2016–2017ರಲ್ಲಿ. 'ನ್ಯೂಯಾರ್ಕ್ ಮೆಟ್ರೋಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್'ನಲ್ಲಿ ಆರು ತಿಂಗಳ ಕಾಲ (ಡಿಸೆಂಬರ್ 17, 2016 – ಜೂನ್ 18, 2017) ನಡೆದ ಅವರ ಮೊದಲ ಪುನರವಲೋಕನ \ ರೆಟ್ರೋಸ್ಪೆಕ್ಟಿವ್ ಪ್ರದರ್ಶನದಿಂದ ಕಲಾಲೋಕ ಅವರನ್ನು ಚರ್ಚಿಸಿತು. ಆ ವಿಶಿಷ್ಟ ಪ್ರದರ್ಶನದಲ್ಲಿ ಶ್ರೀಮತಿಯವರ ಉದ್ದೇಶಿತ ಭಾರತೀಯ ದರ್ಶನ, ದೃಷ್ಟಿ–ಶೈಲಿಯ ಚಿತ್ರಕಲಾ ಕೃತಿಗಳನ್ನು

